ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ಕೆ ರಾಜು |
| ತಂದೆ/ ಗಂಡನ ಹೆಸರು | :- | ಸಿದ್ದಯ್ಯ |
| ವಯಸ್ಸು | :- | 65 ವರ್ಷ |
| ಉದ್ಯೋಗ | :- | ವ್ಯವಸಾಯ |
| ವಾಸಸ್ಥಳ | :- | ಕೋಣಸಾಲೆ |

(ಸಾಕ್ಷಿಗೆ ದಿನಾಂಕಃ 02-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಿಪಿ-8 ರಲ್ಲಿರುವ ಸಹಿಯು ನನ್ನದಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ಖಾಲಿ ಪೇಪರ್ ಗೆ ಸಹಿ ಮಾಡುವಂತೆ ಸೂಚಿಸಿದ್ದು, ಸಾಕ್ಷಿ ಮಾಡಿದ ಸಹಿಯನ್ನು ನಿಪಿ-8 ಕ್ಕೆ ಹೋಲಿಕೆ ಮಾಡಿದ್ದು, ಮೇಲ್ನೋಟದಲ್ಲಿ ಒಂದೇ ರೀತಿ ಕಂಡು ಬರುತ್ತಿದ್ದರಿಂದ ಸದರಿ ದಾಖಲೆಯನ್ನು ನಿಪಿ-8 ರ ಜೊತೆಗೆ ಲಗತ್ತಿಸಲು ಸೂಚಿಸಲಾಯಿತು. ಸುಮಾರು 7-8 ವರ್ಷಗಳ ಹಿಂದೆ ಸಂಜೆ 5.30-6.00 ಗಂಟೆ ಸಮಯದಲ್ಲಿ ಮದ್ದೂರು ಸಂಚಾರ ಠಾಣೆಯಲ್ಲಿ ಸಹಿ ಮಾಡಿದ್ದೆ. ಸದರಿಯವರು ಅಪಘಾತದ ನಿಮಿತ್ತ ಸಹಿ ಮಾಡುವಂತೆ ಕೋರಿದ್ದು ಆದರೆ ನನಗೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಅಮಾನತ್ತುಪಡಿಸಿಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-**

ದಿ 18-05-2018 ರಂದು ಸಂಜೆ 6.45-7.15 ಗಂಟೆ ಸಮಯದಲ್ಲಿ ಮದ್ದೂರು ಸಂಚಾರ ಪೊಲೀಸ್ ಠಾಣಾ ಆವರಣದಲ್ಲಿ ನಿಮ್ಮ ಮತ್ತು ಚಾಸಾ-8 ರವರ ಸಮಕ್ಷಮ ನಿಪಿ-8 ರಂತೆ ಅಮಾನತ್ತು ಪಂಚನಾಮೆ ಮಾಡಿ, ನಿಮಗೆ ಓದಿ ಹೇಳಿ ನಿಮ್ಮ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಕೆಎ-11 ವಿ-9511 ಹೊಂಡಾ ಆಕ್ಟಿವಾ ಸ್ಕೂಟರ್ ನ್ನು ಅಮಾನತ್ತುಪಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

ದಿ 18-05-2018 ರಂದು ನೀವು ಠಾಣೆಗೆ ಹಾಜರಾಗಿ "ದಿ 02-05-2018 ರಂದು................. ಸಹಿ ಮಾಡಿರುತ್ತೇನೆ ." ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಣೆಯ ಭಾಗವನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಿದ್ದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಪಿ-18 ಎಂದು ಗುರುತಿಸಲಾಯಿತು.

ನಿಪಿ-8, 18 ರಲ್ಲಿರುವ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ವಕೀಲರಿಂದಃ–</u>**

ಏನು ಇಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು